

### ಆಧುನಿಕ ಆಯ್ಕೆ!

ಪ್ರೇಮಿ: ನನ್ನ ಸ್ನೇಹಿತನ ಬಳಿಯಿರುವಂತಹ ಕಾರು ನನ್ನಲ್ಲಿಲ್ಲದಿದ್ದರೇನಾಯಿತು? ನನ್ನ ಕಣ್ರೆಪ್ಪೆಯೊಳಗೆ ಜತನವಾಗಿರಿಸಿ ನಿನ್ನನ್ನು ನಾನು ತಿರುಗಾಡಿಸ ಬಲ್ಲೆ; ಆತನಲ್ಲಿರುವಂತಹ ಎರಡೆರಡು ಬಂಗಲೆಗಳಿಲ್ಲದಿದ್ದರೇನಾಯಿತು? ನನ್ನ ಹೃದಯ ಸಾಮ್ರಾಜ್ಯದಲ್ಲಿಟ್ಟು ಪೂಜಿಸಬಲ್ಲೆ; ಅವನಲ್ಲಿರುವಷ್ಟು ಹಣವಿಲ್ಲದಿದ್ದರೇನಾಯಿತು? ಕೂಲಿ ಮಾಡಿಯಾದರೂ ನಿನ್ನ ಸಾಕಬಲ್ಲೆ. ಇದಕ್ಕಿಂತ ಮಿಗಿಲಾಗಿ ನಿನಗಿನ್ನೇನು ಬೇಕು ಪ್ರಿಯೆ?

ಪ್ರೇಯಸಿ: ನಿನ್ನ ಆ ಗೆಳೆಯನ ಮೊಬೈಲ್ ನಂಬರ್ ಕೊಟ್ಟುಬಿಡು...!

★★★

### ಇಡ್ಲಿ

ಗಿರಾಕಿ: 'ಏನಯ್ಯಾ ಮಾಣಿ, ಒಂದು ಪ್ಲೇಟ್ ಇಡ್ಲಿ ಕೊಡು ಎಂದರೆ ಪ್ಲೇಟ್‌ನಲ್ಲಿ ಬರೀ ಎರಡು ಚಮಚಗಳು ಕಾಣ್ತಾಯಿವೆ. ಇಡ್ಲಿ ಎಲ್ಲಿ?'

ಮಾಣಿ: 'ಚಮಚಗಳನ್ನು ಎತ್ತಿ ನೋಡಿ, ಇಡ್ಲಿ ಕಾಣಿಸುತ್ತೆ!'

★★★

### ಬಸ್ ಪ್ರಯಾಣ

ಪ್ರಯಾಣಿಕ: 'ಕಂಡಕ್ಟರ್, ಯಾವಾಗ್ರೀ ಈ ಬಸ್ ಹೊರಡೋದು?'

ಕಂಡಕ್ಟರ್: 'ಒಂದು ಗಂಟೆಯಿಂದಲೂ ಹೇಳ್ತಾನೇ ಇದ್ದೀನಿ; ಇನ್ನು ಐದು ನಿಮಿಷಗಳಲ್ಲಿ ಈ ಬಸ್ ಹೊರಡುತ್ತೆ ಅಂತ. ಕೇಳಿಸುತ್ತಿಲ್ಲವಾ?'

★★★

### ನಿಕ್ಕರ್

ಗಿರಾಕಿ: 'ನಾನು ನಿಕ್ಕರ್ ಕೇಳಿದರೆ ನೀನು ಪ್ಯಾಂಟ್ ತೋರಿಸುತ್ತಿದ್ದೀಯಲ್ಲಪ್ಪ?'

ಸೇಲ್ಸ್‌ಮ್ಯಾನ್: 'ನನಗೆ ಗೊತ್ತು. ನೀವು ಹೀಗೆ ಕೇಳುತ್ತೀರಂತ. ಒಮ್ಮೆ ಈ ಪ್ಯಾಂಟನ್ನು ನೀರಿಗೆ ಹಾಕಿ ಬಿಡಿ. ಅದು ತನಗೆ ತಾನೇ ನಿಕ್ಕರ್ ಆಗಿಬಿಡುತ್ತೆ!'

**(ಸಂಗ್ರಹ) ಎ.ಕೆ.ಪಟ್ಟಾಭಿ, ಬೆಂಗಳೂರು**

### ವ್ಯವಹಾರ ಚತುರತೆ!

ವಾಣಿಜ್ಯ ವಿದ್ಯಾರ್ಥಿಯೋರ್ವ ತನ್ನ ಸಹಪಾಠಿ ವಿದ್ಯಾರ್ಥಿನಿಯನ್ನು ಲೈಬ್ರೆರಿಯಲ್ಲಿ ಒಬ್ಬಂಟಿಯಾಗಿದ್ದಾಗ ತಬ್ಬಿಕೊಂಡ.

ಹುಡುಗಿ (ಮುನಿಸಿನಿಂದ): ಏನಿದು?

ಹುಡುಗ: ಡೈರೆಕ್ಟ್ ಮಾರ್ಕೆಟಿಂಗ್...

ಹುಡುಗಿ ಛಟೀರೆಂದು ಆತನ ಕೆನ್ನೆಗೊಂದೇಟು ಬಾರಿಸಿಳು.

ಹುಡುಗ (ನೋವಿನಿಂದ): ಇದೇನು?

ಹುಡುಗಿ: ಕಸ್ಟಮರ್ ಫೀಡ್ ಬ್ಯಾಕ್...!

★★★

### ಪುರಾವೆ

ಗೋಪಿ ಬಿಯರ್ ಕುಡಿಯಲೆಂದು ಬಾರ್‌ಗೆ ತೆರಳಿದ. ಅಲ್ಲಿ 3 ಬಾಟಲ್ ಬಿಯರ್ ಕುಡಿದಾದ ನಂತರ;

ವೈಟರ್: ನಿಮಗೇಕೆ ಅಮಲೇರುವುದಿಲ್ಲ?

ಗೋಪಿ: ಏಕೆಂದರೆ ನಾನೊಬ್ಬ ಗಂಡುಗಲಿ... ಹುಲಿ...

ವೈಟರ್: ಸರಿ ಸರಿ... ಈಗ ಹತ್ತಿ ಬಿಟ್ಟಿದೆ...!

★★★

### ಸ್ನೇಹಿತನ ಮನೆ!

ಗೋಪಿ ತನ್ನ ಬಾಲ್ಯ ಸ್ನೇಹಿತನ ಮನೆಗೆ ಹೋಗಿ ಡೋರ್ ಬೆಲ್ ಅದುಮಿದಾಕ್ಷಣ ಪುಟ್ಟ ಬಾಲಕನೋರ್ವ ಹೊರ ಬಂದ.

ಗೋಪಿ: ಮಗೂ ನಿನ್ನಪ್ಪ ಮನೆಯಲ್ಲಿರುವರೆ?

ಪುಟ್ಟ: ಅವರು ಮಾರ್ಕೆಟ್‌ಗೆ ಹೋಗಿದ್ದಾರೆ ಅಂಕಲ್.

ಗೋಪಿ: ಹಾಗಾದರೆ ನಿನ್ನ ಅಣ್ಣನನ್ನು ಕರೆಯುವೆಯಾ?

ಪುಟ್ಟ: ಅವನು ಕ್ರಿಕೆಟ್ ಆಡಲು ಹೋಗಿದ್ದಾನೆ.

ಗೋಪಿ: ನಿನ್ನಮ್ಮನಾದರೂ ಮನೆಯಲ್ಲೇ ಇದ್ದಾರೆ ತಾನೆ?

ಪುಟ್ಟ: ಅವರೂ ಗೆಳತಿಯರೊಂದಿಗೆ ಪಿಕ್‌ನಿಕ್‌ಗೆ ತೆರಳಿದ್ದಾರೆ...

ಗೋಪಿ (ಹತಾಶನಾಗಿ): ಹಾಗಾದರೆ ನೀನೊಬ್ಬನೇ ಏಕಿದ್ದೀಯಾ, ನೀನೂ ಎಲ್ಲಾದರೂ ಹೊರ ಹೊರಡಬೇಕಿತ್ತು?

ಪುಟ್ಟ: ಅದಕ್ಕೇ ಅಂಕಲ್... ನಾನೂ ನನ್ನ ಸ್ನೇಹಿತನ ಮನೆಗೆ ಬಂದು ಬಿಟ್ಟಿದ್ದೇನೆ!

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್**

